ಬಂದಮೇಲೆ ಸಿಗುತ್ತಿತ್ತು. ಒಂದು ರೀತಿಯಲ್ಲಿ ಟಾಕ್ಲೆಯ ಜತೆ ಷಣ್ಮುಖ ಕೃಪಾದಲ್ಲಿ ಟಾಕ್ಲೆಯ ಜತೆ ಮುರುಕು ತಿಂದಾಗಲೋ, ಏನಾದರೊಂದು ಹೆಸರಿನಲ್ಲಿ ಸಿಗುವ ಎಣ್ಣೆಯಲ್ಲಿ ಹುರಿದ ಬಜಿ ಬಿಸಿ ಬಿಸಿಯಾಗಿ ತಿಂದಾಗಲೋ, ಆ ಹೊತ್ತಿಗೆ ಹಿತವಾದ ಬಿಸಿಯೊಂದಿಗೆ ಗಂಟಲಲ್ಲಿಳಿದು ಒಳಸೇರುವ ಚಹಾ ಆಸ್ವಾದಿಸುವಾಗಲೋ ಸಿಗುತ್ತಿದ್ದ ಖುಷಿಯೇ ಬೇರೆ ಇರುತ್ತಿತ್ತು. ಇಂಥ ಈ ಚಿಕ್ಕ ಚಿಕ್ಕದೇ, ಬದುಕಿನ ಧನ್ಯತೆಗಳಾಗುವ ದಿವ್ಯಗಳು ಎಂದು ವಾಮನ ಯೋಚಿಸುತ್ತಿದ್ದ. ಇನ್ನೊಂದು ಪ್ಲೇಟ್ ಬಜಿ ತರಲು ಹೇಳ್ಲಾ ಎಂದು ಟಾಕ್ಲೆ ಕಕ್ಕುಲತೆಯಿಂದ ಕೇಳುತ್ತಿದ್ದ. ಎಂದೂ ಬಿಲ್ ಕೊಡಲು ವಾಮನನಿಗೆ ಅವಕಾಶ ಕೊಡಲಿಲ್ಲ. ತಾನೇ ಹಣ ಕೊಡುತ್ತಿದ್ದ. ಎಂದೂ ತನ್ನ ಪಡಿಪಾಟಲು ಹೇಳಿಕೊಂಡವನಲ್ಲ. ''ಅಣ್ಣ ಜಗದೀಶ ಆರಾಮವಾಗಿದ್ದಾನಲ್ಲೊ, ಬರುತ್ತಾನಾ ಈ ವರ್ಷ?'' ಎಂದು ಅಣ್ಣನ ಬಗೆಗೆ ವಾಮನನ ಬಳಿ ಕೇಳುತ್ತಿದ್ದ. ''ಜಗದೀಶ ಬಂದಿದ್ದ, ಭೇಟಿಯಾದೆವು. ಊಟ ಮಾಡಿದೆವು'' ಎಂದು ಸಂಭ್ರಮದಿಂದ ಹೇಳುತ್ತಿದ್ದ. ಜಗದೀಶ ಇಂಡಿಯಾಕ್ಕೆ ಬಂದಾಗ, ಊರಿಗೆ ಬರುತ್ತಿರುವಾಗಲೇ ಸ್ವಾಗತಿಸುತ್ತಿರುವವರಲ್ಲಿ ಟಾಕ್ಲೆಯೂ ಒಬ್ಬ. ವಾಮನನ ಅಣ್ಣ ಟೋಕಿಯೊದಲ್ಲಿ ಇರುತ್ತಿದ್ದ. ವಾಮನ ಬೆಂಗಳೂರಿನಲ್ಲಿ ಇರುತ್ತಿದ್ದುದು. ಇಬ್ಬರೂ ಎಂಜಿನಿಯರುಗಳೇ. ಟಾಕ್ಲೆಗೆ ಮೆಟ್ರಿಕ್ ಮೀರಿ ಮೇಲೆ ಬರಲು ಆಗಲಿಲ್ಲ. ಮೆಸರ್ಸ್ ದೇವಸಿಂಧೂರಿ ಟ್ರೇಡರ್ಸ್ ಎಂಬ ಕಿರಾಣಿ ಅಂಗಡಿಯನ್ನು ಟಾಕ್ಲೆ ಟ್ರೇಡರ್ಸ್ ಎಂದು ಮೂಲದ ದೇವಸಿಂಧೂರಿ ಪಾರ್ಟನರ್‌ಶಿಪ್ ಗ್ರೂಪಿಂದ ಹೊರಬಂದು ತಾನೇ ಸ್ವತಂತ್ರವಾಗಿ ನಡೆಸತೊಡಗಿದ್ದ. ಕುಟುಂಬದಲ್ಲಿದ್ದ ಹಲವು ಅಶಾಂತಿಯ ವಿಚಾರಗಳ ಕುರಿತು ಅಣ್ಣ ಜಗದೀಶನ ಬಳಿ ದುಃಖದಿಂದ ಹೇಳಿಕೊಂಡಿದ್ದ ಎಂಬುದನ್ನೂ ವಾಮನ ತಿಳಿದಿದ್ದ. ಆದರೆ, ಎಂದೂ ತನ್ನ ದುಃಖ, ಅಸಮಾಧಾನ, ತಾಪತ್ರಯಗಳ ಕುರಿತು ವಾಮನನ ಬಳಿ ತುಟಿ ಬಿಚ್ಚಿದ್ದೇ ಇಲ್ಲ.

''ಆರಾಮವಾಗಿರಬೇಕೋ ನೀನು ವಾಮನ'' ಎಂದು ವಿಸ್ತಾರದ ದಂತಪಂಕ್ತಿ ತೆರೆದು ಹಾರೈಕೆಯ ಧ್ವನಿಯಲ್ಲಿ ಹಾರೈಸುತ್ತಿದ್ದ. ಟಾಕ್ಲೆಯ ಜಗತ್ತೇ ಹಾಗೆ ಎನ್ನಬಹುದು. ಅದು ಹೊರವಲಯದಲ್ಲಿ ಸದಾ ಸುಖಿಯಂತೆ (ಒಳಗಿನದು ಹೇಗೋ ತಿಳಿಯದು) ಕಾಣಿಸುತ್ತಿತ್ತು. ಅಂತೂ ಟಾಕ್ಲೆಯದು ಸಹೃದಯತೆಯೇ ಜೀವಾಳವಾದ ಬದುಕು.

ಒಟ್ಟಿನಲ್ಲಿ ಜೀವನ ಹೀಗೆ ಉರುಳಾಡಿಕೊಂಡಿರುವ ಬಗೆಯಲ್ಲಿ ಒಂದು ಸಂಗೀತದ ಆಲಾಪವಿದೆ ಎಂದು ತಿಳಿಯಬಹುದಲ್ಲವೆ ಎಂದು ವಾಮನ, ಪಂಡಿತ್ ದುರ್ಗಾದಾಸ್ ಅವತಾರ ಕೃಷ್ಣ ಮಹಾರಾಜರ ಬಳಿ ಪ್ರಶ್ನಿಸಿದ್ದ. ಪಂಡಿತ್ ದುರ್ಗಾದಾಸ್ ಖ್ಯಾತ ಹಿಂದುಸ್ತಾನೀ ಗಾಯಕರು. ಒಮ್ಮೆ ಗೋರಖಪುರಕ್ಕೆ ಕೆಲಸದ ಕಾರಣದಿಂದ ವಾಮನ ಪ್ರಯಾಣ ನಡೆಸಿದ್ದಾಗ ಅವತಾರ ಕೃಷ್ಣ ಮಹಾರಾಜರ ಪರಿಚಯವಾಗಿತ್ತು. ರೇಡಿಯೊದಲ್ಲಿ, ಟಿವಿ ಕಾರ್ಯಕ್ರಮಗಳಲ್ಲಿ, ಬೆಂಗಳೂರಿನ ಪ್ರತಿಷ್ಠಿತ ಅಡಿಟೋರಿಯಂ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸುತ್ತಿದ್ದುದು ವಾಮನನಿಗೆ ಅರಿವಿತ್ತು. ಸಂಗೀತದ ಬಗೆಗೆ ವಾಮನನಿಗೆ ಆಸ್ಥೆ ಇದೆ. ವಾಸ್ತವಕ್ಕೂ ವಾಮನನ ಪತ್ನಿ ತಾರಿಣಿ ಬೆಂಗಳೂರಿನ ಸುಂದರ ನಗರದಲ್ಲಿ ವಾಸವಿದ್ದ ಕಸ್ತೂರಿ ಮೇಡಂ ಬಳಿ ರಾಗಗಳನ್ನು ಕಲಿಯಲು ಒಲವು ತೋರಿಸಿ ನಾಲ್ಕೈದು ಬಾರಿ ಮೇಡಂ ಮನೆಗೆ ಎಡತಾಕಿದ್ದಳು. ಯಾಕೋ ಅವಳಿಗೆ ಸರಿಹೋಗಲಿಲ್ಲ. ಕೇಳುವುದರಲ್ಲಿನ ಆನಂದ ಹಾಡುವುದರಲ್ಲಿ ಇಲ್ಲ ಎಂದು ವಾದಿಸಿದಳು. ನಿನ್ನ ಇಷ್ಟದಂತೆ ಮಾಡು ಎಂದು ವಾಮನ ಹೇಳಿದ್ದ. ಆದರೂ ತಾನೇ ತನ್ನಷ್ಟಕ್ಕೆ ಹಾಡುತ್ತಿದ್ದಳು. ತಾನು ಅಷ್ಟೊಂದು ಆಸಕ್ತಿಯನ್ನು ಸಂಗೀತದ ಬಗೆಗಾಗಿ ತಳೆದದ್ದು ಪತ್ನಿ ತಾರಿಣಿಯಿಂದಲೋ, ಇಲ್ಲಾ ತನ್ನಲ್ಲಿಯೇ ಒಂದು ಸಂಗೀತದ ಸುಪ್ತ ಸ್ಥಾವರ ಗಟ್ಟಿಯಾಗಿ ಹರಳುಗಟ್ಟಿಕೊಂಡೇ ಇದೆಯೋ ಎಂಬುದನ್ನು ತಿಳಿಯದಾಗಿದ್ದ. ಯಾರಾದರೂ ಹಾಡುವಾಗ ಆಲಾಪಗಳು ತೀರಾ ಸೆಳೆಯುತ್ತಿದ್ದವು ಇವನನ್ನು.

ವಿಮಾನದಲ್ಲಿಯೇ ವಾಮನ ಪಂಡಿತ್ ದುರ್ಗಾದಾಸ್ ಅವತಾರ ಕೃಷ್ಣ ಮಹಾರಾಜರನ್ನು ಮೊಟ್ಟ